(ಇಂದು ದಿನಾಂಕಃ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಎಸ ವಕೀಲರಿಂದ ಃ**

1. ದಾವಾ ಮನೆ ಆಸ್ತಿಯನ್ನು ಅಮಿತಸಿಂಗರವರ ಮುತ್ಯ ಹಿರಾಸಿಂಗ ಖರೀದಿ ಮಾಡಿರುವ ಆಸ್ತಿ ಎಂದರೆ ಸಾಕ್ಷಿ ಅದು ಹಿರಾಸಿಂಗರವರ ಮನೆ ಇರುತ್ತದೆ ಎಂದು ಹೇಳುತ್ತಾರೆ. ಹಿರಾಸಿಂಗರವರ ಮೂಲ ಊರು ಬೀದರ ತಾಃ ನಿಡವಂಚಿ ಗ್ರಾಮ ಎಂದರೆ ಸರಿ. ದಾವಾ ಮನೆ ಆಸ್ತಿಯನ್ನು ದಾನದ ರೂಪದಲ್ಲಿ ಹಿರಾಸಿಂಗ ಬರೆದು ಕೊಟ್ಟಿದ್ದರು ಎಂದರೆ ಸರಿ. ಎಲ್ಲಾ ದಾವಾ ಆಸ್ತಿಗಳನ್ನು ಹಿರಾಸಿಂಗರವರು ಸ್ವಂತ ಖರೀದಿ ಮಾಡಿದ್ದರಿಂದ ಈ ಆಸ್ತಿಗಳನ್ನು ತನ್ನ ಮೊಮ್ಮಗನಾದ ಅಮಿತಸಿಂಗರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ ಆ ದಾನ ಪತ್ರದ ಸಂಖ್ಯೆ 812/2004-2005 ಇದೆ ಎಂದರೆ ಸರಿ. ದಿಃ30-10-2004 ರಂದು ಸಬರೆಜಿಸ್ಟರ ಕಛೇರಿಯಲ್ಲಿ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಹಿರಾಸಿಂಗರವರು ಈ ಆಸ್ತಿಗಳನ್ನು ತನ್ನ ಮೊಮ್ಮಗನಾದ ಅಮಿತಸಿಂಗರವರಿಗೆ ಅವರಿಗೆ ದಾನ ಮಾಡಿಕೊಡುವಾಗ ಅಮಿತಸಿಂಗ ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ಅಮಿತಸಿಂಗರವರ ತಾಯಿ ಕಲಾವತಿ ಅಲ್ಲ ಎಂದರೆ ಸರಿ. ಅಮಿತಸಿಂಗರವರ ತಾಯಿಯ ಹೆಸರು ರೆಖಾಬಾಯಿ ಇರುತ್ತದೆ. ಈ ದಾವೆಯಲ್ಲಿ ಕಲಾವತಿ ಗಂಡ ರಾಜೇಂದ್ರ ಪ್ರಸಾದ ತಿವಾರಿರವರನ್ನು ಪಕ್ಷಗಾರರನ್ನಾಗಿ ಏಕೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಅಮಿತಸಿಂಗರವರನ್ನು ಕಲಾವತಿ ಗಂಡ ರಾಜೆಂದ್ರ ಪ್ರಸಾದ ತಿವಾರರವರು ಬೆಳೆಸಿರುತ್ತಾರೆ ಎಂದು ಹೇಳುತ್ತಾರೆ. ಅಮಿತಸಿಂಗರವರ ತಾಯಿ 2 ನೇ ಮದುವೆ ಆಗಿ ಹೋಗಿದ್ದರಿಂದ 2 ನೇ ಪ್ರತಿವಾದಿಯು ಅಮಿತಸಿಂಗರವರ ಪಾಲನೆ ಪೋಷಣೆ ಮಾಡಿರುತ್ತಾರೆ ಎಂದರೆ ಸರಿ. ಕಲಾವತಿ ಮತ್ತು ನನಗೂ ಹಾಗೂ ದಾವಾ ಆಸ್ತಿಗಳಿಗು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿ.

2. ನನ್ನ ಮದುವೆ ಅಮಿತಸಿಂಗರವರ ಜೊತೆ 2018 ರಲ್ಲಿ ಆಗಿದೆ. ನಾನು ಜೀವನಾಂಶ ಕೋರಿ ನನ್ನ ಗಂಡನ ವಿರುದ್ಧ ಇನ್ನೊಂದು ಅರ್ಜಿ ಸಲ್ಲಿಸಿರುತ್ತೆನೆ ಎಂದರೆ ಸರಿ. ದಾವಾ ಮನೆಯ ಆಸ್ತಿಯನ್ನು ಅಮಿತಸಿಂಗರವರು ತಮ್ಮ ಸಾಲವನ್ನು ತೀರಿಸಿಕೊಳ್ಳಲು ಈ ಆಸ್ತಿಯ ಬಗ್ಗೆ ಕ್ರಯದ ಕರಾರು ಪತ್ರ ಮಾಡಿದ್ದು ಈಗಾಗಲೇ ಖರೀದಿ ಪತ್ರ ಆಗಿರುತ್ತದೆ ಎಂದರೆ ಸರಿ. ನನ್ನ ಮದುವೆ ಖರ್ಚಿಗಾಗಿ ಮತ್ತು 2 ದಾವೆಗಳನ್ನು ನಡೆಸಲು ಅಮಿತಸಿಂಗರವರು ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 29/2012 ಮತ್ತು 21/2013 ರಲ್ಲಿ ಏನು ತೀರ್ಪುಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಈ ಎರಡು ದಾವೆಯಲ್ಲಿ ಆಸ್ತಿಗಳು ಅಮಿತಸಿಂಗರವರಿಗೆ ದಾನದ ರೂಪದಲ್ಲಿ ಬಂದಿರುತ್ತವೆ ಎಂದು ತೀರ್ಪುಗಳು ಆಗಿವೆ ಎಂದರೆ ಸರಿ. ಆರ.ಎ ನಂಬರ 93/2016 ಮತ್ತು 94/2016 ರಲ್ಲಿ ಆಸ್ತಿಗಳು ಅಮಿತಸಿಂಗರವರಿಗೆ ದಾನದ ರೂಪದಲ್ಲಿ ಬಂದಿರುತ್ತವೆ ಎಂದು ತೀರ್ಪುಗಳು ಆಗಿವೆ ಎಂದರೆ ಸರಿ. ಆಸ್ತಿಗಳು ಅಮಿತಸಿಂಗರವರಿಗೆ ದಾನದ ರೂಪದಲ್ಲಿ ಬಂದಿದ್ದರಿಂದ ನನಗೆ ಮತ್ತು ನನ್ನ ಮಗನಿಗೆ ಅಮಿತಸಿಂಗ ಬದುಕಿರುವವರೆಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ನನಗೆ ಆಸ್ತಿ ಬೇಕು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಅಮಿತಸಿಂಗರವರಿಗೆ ದಾನದ ರೂಪದಲ್ಲಿ ಬಂದಿದ್ದರಿಂದ ಅದು ಅವನ ಸ್ವಂತ ಆಸ್ತಿ ಆಗಿದ್ದರಿಂದ ನನಗೆ ಮತ್ತು ನನ್ನ ಮಗನಿಗೆ ಮತ್ತು ಅವನ ಯಾವುದೇ ಸಂಬಂಧಿಕರಿಗೆ ಅಮಿತಸಿಂಗ ಬದುಕಿರುವವರೆಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಹಿರಾಸಿಂಗರವರು ತಮ್ಮ ಸ್ವಂತ ಆಸ್ತಿಗಳನ್ನು ಅಮಿತಸಿಂಗರರಿಗೆ ದಾನ ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ಹಿರಾಸಿಂಗರವರು ಬದುಕಿರುವವರೆಗೆ ತಮ್ಮ ಸ್ವಂತ ಆಸ್ತಿಗಳನ್ನು ಬೇರೆ ಯಾರಿಗೂ ಕೊಟ್ಟಿಲ್ಲ, ಅಮಿತಸಿಂಗರವರಿಗೆ ಮಾತ್ರ ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗು ಮತ್ತು ನನಗೊ ಯಾವುದೇ ರೀತಿಯ ಸಂಬಂಧ ಇಲ್ಲದೆ ಇದ್ದರು ಸಹ

ಅಮಿತಸಿಂಗರವರಿಗೆ ತೋಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.